ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ದಿನಾಂಕ : DATE : 20/07/2019
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ಕೋಟಿ ಸಂಪಾದಿಸುವವರನ್ನು ಪ್ರಶ್ನಿಸುವವರೇ ಇಲ್ಲ | ಸಿಡಿಮಿಡಿಗೊಂಡ ರಮೇಶ್‌ಕುಮಾರ್

# ಯಾರ ಒತ್ತಡಕ್ಕೂ ನಾನು ಬಗ್ಗುವುದಿಲ್ಲ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನನ್ನ ಮೇಲೆ ಒತ್ತಡ ಹೇರಲು ಯಾರಿಂದಲೂ ಸಾಧ್ಯವಿಲ್ಲ. ಅಂಥವರು ಯಾರೂ ಹುಟ್ಟಿಲ್ಲ. ಯಾರ ಒತ್ತಡಕ್ಕೂ ನಾನು ಬಗ್ಗುವವನೂ ಅಲ್ಲ ಎಂದು ಸ್ಪೀಕರ್ ರಮೇಶ್ ಕುಮಾರ್ ಸಿಡಿಮಿಡಿಗೊಂಡ ಪ್ರಸಂಗ ವಿಧಾನಸಭೆಯಲ್ಲಿ ನಡೆಯಿತು.

ವಿಶ್ವಾಸಮತ ಯಾಚನೆಗೆ ತಡ ಮಾಡಬಾರದೆಂದು ಬಿಜೆಪಿ ನಾಯಕರು ಒತ್ತಾಯ ಮಾಡಿದಾಗ ಬಿಸಿಬಿಸಿ ಚರ್ಚೆ ನಡೆಯಿತು. ಈ ವೇಳೆ ತಾಳ್ಮೆ ಕಳೆದುಕೊಂಡ ಸ್ಪೀಕರ್ ಸಿಟ್ಟಾದರು.

ಕಲಾಪದ ಆರಂಭದಲ್ಲಿ ಮಾತನಾಡಿದ ಸ್ಪೀಕರ್, ನನ್ನ ವಿರುದ್ಧ ಮತದಾನವನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿರುವ ಆರೋಪ ಕೇಳಿಬಂದಿದೆ. ನನ್ನ ವಿರುದ್ಧ ಇಂಥ ಲಕ್ಷ ಆರೋಪ ಬಂದರೂ ಅದನ್ನು ಮೆಟ್ಟಿ ನಿಲ್ಲುವ ಧೈರ್ಯವನ್ನು ನನ್ನ ತಂದೆ-ತಾಯಿ ನೀಡಿದ್ದಾರೆ. ನನ್ನನ್ನು ರಕ್ಷಣೆ ಮಾಡಿದ ಜನ ನನಗೆ ಆ ಶಕ್ತಿ ನೀಡಿದ್ದಾರೆ ಎಂದರು.

ಅಡ್ವೊಕೇಟ್ ಜನರಲ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದೇನೆ. ಅವರು ಕಾನೂನಾತ್ಮಕವಾಗಿ ತಮ್ಮ ಸಲಹೆಗಳನ್ನು ನೀಡಿದ್ದಾರೆ. ಕ್ರಿಯಾಲೋಪದ ಮೇಲಿನ ರೂಲಿಂಗ್ ತಡೆ ಹಿಡಿದಿದ್ದೇನೆ. ನಾನು ಸ್ಪಷ್ಟವಾಗಿದ್ದೇನೆ. ಕಲಾಪದ ಕೊನೆಯಲ್ಲಿ ರೂಲಿಂಗ್ ನೀಡುತ್ತೇನೆ ಎಂದು ಹೇಳಿದರು. ನನಗೆ ಪಕ್ಷಪಾತ ಮಾಡಬೇಕಾದ ಸ್ಥಿತಿ ಬಂದಿಲ್ಲ. ಸಾರ್ವಜನಿಕ ಜೀವನದಲ್ಲಿ ನಾನು ಇಲ್ಲಿಯವರೆಗೆ ಹೇಗೆ ಬಂದಿದ್ದೇನೋ ಈಗಲೂ ಹಾಗೆಯೇ ಇದ್ದೇನೆ ಎಂದು ತಿಳಿಸಿದ ಅವರು, ಮತದಾನಕ್ಕೆ ವಿಳಂಬ ಮಾಡುತ್ತಿದ್ದೇನೆ ಎಂಬ ಆರೋಪ ಕೇಳಿ ಬಂದಿದೆ. ಅನೇಕ ಪ್ರತಿನಿಧಿಸಿಕೊಂಡವರು, ಪ್ರತಿಪಕ್ಷಗಳ ಸದಸ್ಯರು, ಮಾಧ್ಯಮಗಳು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ, ಎಲ್ಲವನ್ನೂ ಗಮನಿಸಿದ್ದೇನೆ. ಆದರೆ ಯಾವುದೇ ಒತ್ತಡಕ್ಕೂ ನಾನು ಬಗ್ಗಲ್ಲ ಎಂದರು. ನನ್ನ ವೈಯಕ್ತಿಕ ಜೀವನ ನೋಡಿದರೆ ನಾನು ಎಷ್ಟು ಸಾವಿರ ಕೋಟಿ ರೂ. ಮಾಡಿದ್ದೇನೆ ಎಂಬುದು ತಿಳಿಯುತ್ತದೆ.



## ಬೆಂಕಿ ಮೇಲೆ ಕೂತಿದ್ದೇನೆ...

ನಾನು ಬೆಂಕಿ ಮೇಲೆ ಕೂತಿದ್ದೇನೆ, ಇಲ್ಲಿ ಕೂತು ಹೇಗೆ ಕೆಲಸ ಮಾಡುತ್ತಿದ್ದೇನೆ ಎಂಬುದು ನನಗೆ ಗೊತ್ತಿದೆ. ನನ್ನ ಸೊಸೆ ಮಗಳಿದ್ದಂತೆ, ಅಪ್ಪ ಅಂತಾನೆ ಕರೆಯುತ್ತಾಳೆ. ಇವತ್ತು ಸದನಕ್ಕೆ ಹೊರಟಾಗ 12 ಕೋಟಿ ರೂ. ನಷ್ಟವೆಂದಳು, ಒಂದು ದಿನ ಸದನ ನಡೆಸಲು ಇಷ್ಟು ಹಣ ಖರ್ಚಾಗುತ್ತದೆ ಎಂದು ಸ್ಪೀಕರ್ ರಮೇಶ್ ಕುಮಾರ್ ಹೇಳಿದರು.

ನನ್ನ ಮನೆಗೆ ಸೆಕ್ಯುರಿಟಿ ಇಟ್ಟುಕೊಂಡಿಲ್ಲ, ಸರ್ಕಾರಿ ಕಾರಿನ ಗೂಟ ತೆಗೆಸಿದ್ದೇನೆ. ಲಜ್ಜೆ ಬಿಟ್ಟು ಕೋಟ್ಯಂತರ ರೂ. ಸಂಪಾದಿಸುವವರನ್ನು ಪ್ರಶ್ನಿಸುವವರೇ ಇಲ್ಲ ಎಂದರು.

ನಾನು ಮತ್ತೊಮ್ಮೆ ಸೌಮ್ಯಭಾಷೆಯಲ್ಲಿ ಎಚ್ಚರಿಕೆ ನೀಡುತ್ತೇನೆ. ನನ್ನ ಚಾರಿತ್ರ್ಯವಧೆ ಮಾಡಲು ಪ್ರಯತ್ನಿಸುವವರು ತಮ್ಮ ಹಿನ್ನೆಲೆ ಹೇಗಿದೆ ಎಂಬುದನ್ನು ನೂರು ಬಾರಿ ನೋಡಿಕೊಳ್ಳಬೇಕು ಎಂದು ಚಾಟಿ ಬೀಸಿದ ಅವರು, ನನ್ನ ಸುದ್ದಿಗೆ ಬರಬೇಡಿ. ನಾನಿಲ್ಲಿ ಗಟ್ಟಿಯಾಗಿ ಕೂತುಕೊಳ್ಳಲು ಬಂದಿಲ್ಲ. ನಾನು ಆಡುವ ಮಾತು ಮತ್ತು ಕೊಡುವ ತೀರ್ಪು ಇತಿಹಾಸದಲ್ಲಿ ಉಳಿಯಬೇಕು ಎಂದು ಬಯಸುವುದಾಗಿ ಹೇಳಿದರು.

## ರಾಜ್ಯಪಾಲರ ವಿರುದ್ಧ ಸಚಿವರ ವಾಗ್ದಾಳಿ



ಬೆಂಗಳೂರು: ವಿಶ್ವಾಸಮತ ಯಾಚನೆಗೆ ರಾಜ್ಯಪಾಲರ ಸೂಚನೆಗೆ ಅವಕಾಶವಿಲ್ಲ. ಸಂವಿಧಾನದ 3 ಅಂಗಗಳಿಗೆ ಅದರದ್ದೇ ಆದ ವ್ಯಾಪ್ತಿ ಇದೆ. ರಾಜ್ಯಪಾಲರು ಶಾಸಕಾಂಗ ನಿಯಂತ್ರಿಸುವುದು ಸರಿಯಲ್ಲ ಎಂದು ಸಚಿವ ಕೃಷ್ಣಬೈರೇಗೌಡ ವಾಗ್ದಾಳಿ ನಡೆಸಿದರು.

ಸಿಎಂ ವಿಶ್ವಾಸಮತ ಯಾಚನೆ ಸಂದರ್ಭ ಮಧ್ಯಪ್ರವೇಶಿಸಿ ಮಾತನಾಡಿದ ಅವರು, ಸಭಾನಾಯಕರು ಸ್ವ-ಪ್ರೇರಣೆಯಿಂದ ವಿಶ್ವಾಸಮತ ಯಾಚನೆ ಪ್ರಸ್ತಾವನೆ ಮಂಡಿಸಿ, ಚರ್ಚಿಸುತ್ತಿದ್ದಾರೆ. ಈ ಹಂತದಲ್ಲಿ ಸದನದ ಕಾರ್ಯಕಲಾಪದಲ್ಲಿ ರಾಜ್ಯಪಾಲರ ಹಸ್ತಕ್ಷೇಪಕ್ಕೆ ಅವಕಾಶ ಇಲ್ಲ, ಅರುಣಾಚಲ ಪ್ರದೇಶದಲ್ಲಿ ನಡೆದ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನ ಸಂವಿಧಾನ ಪೀಠವೇ ಹೇಳಿದೆ ಎಂದು ತೀರ್ಪನ್ನು ಓದಿದರು.

ರಾಜ್ಯಪಾಲ ವಿ.ಆರ್.ವಾಲಾ ಶುಕ್ರವಾರ ಮಧ್ಯಾಹ್ನ 1.30ರ ಒಳಗೆ ಬಹುಮತ ಸಾಬೀತು ಪಡಿಸಲು ಮುಖ್ಯಮಂತ್ರಿಗೆ ನೀಡಿರುವ ಸೂಚನೆ ಪ್ರಸ್ತಾಪಿಸಿದ ಅವರು, ಕೋರ್ಟ್‌ನ ವಿವಿಧ ತೀರ್ಪನ್ನೂ ಉಲ್ಲೇಖಿಸಿ ರಾಜ್ಯಪಾಲರ ಮಧ್ಯಪ್ರವೇಶ ಸರಿಯಲ್ಲ ಎಂದರು.

ಭಾರತ ಸರ್ಕಾರದ ಕಾಯ್ದೆ 63ರಲ್ಲಿ ಸದನಕ್ಕೆ ಸ್ವ-ಇಚ್ಛೆ ಮೇರೆಗೆ ನಿರ್ದೇಶನಗಳನ್ನು ನೀಡಲು ರಾಜ್ಯಪಾಲರಿಗೆ ಅವಕಾಶ ನೀಡಲಾಗಿತ್ತು. ಆದರೆ, ಭಾರತದ ಸಂವಿಧಾನದಲ್ಲಿ ಈ ಅಂಶವನ್ನು ಅಳವಡಿಸಿಕೊಳ್ಳುವಾಗ ಅದು ಪರಿಚ್ಛೇದ 175 ಆಗಿದ್ದು, ಇದರಲ್ಲಿ ಸ್ವ-ಇಚ್ಛೆ ಮೇರೆಗೆ ರಾಜ್ಯಪಾಲರಿಗೆ ಸದನಕ್ಕೆ ನೀಡಲಿದ್ದ ಅವಕಾಶ ತೆಗೆದು ಹಾಕಲಾಗಿದೆ ಎಂದರಲ್ಲದೆ, ಅರುಣಾಚಲ ಪ್ರದೇಶದ ಪ್ರಕರಣದಲ್ಲಿ 2015ರ ಡಿ. 9ರಂದು ನೀಡಿದ್ದ ಆದೇಶದಲ್ಲಿ ಸಾಂವಿಧಾನಿಕ ಪೀಠ ಹೇಳಿರುವ ಅಂಶ ಉಲ್ಲೇಖಿಸಿದರು. ಸಂಪುಟದ ಸಲಹೆ ಮೇರೆಗೆ ಸಂದೇಶ ಕಳುಹಿಸಲು ರಾಜ್ಯಪಾಲರಿಗೆ ಅವಕಾಶವಿದೆ ಬಿಟ್ಟರೆ ಬೇರೆ ಸಂದೇಶಕ್ಕಿಲ್ಲ. ಸದನದ ಕಾರ್ಯಸೂಚಿ ಬಗ್ಗೆ ನಿರ್ಧರಿಸಲು ಅವರಿಗೆ ಅವಕಾಶ ಇಲ್ಲ ಎಂದರು.

ಕೃಷ್ಣಬೈರೇಗೌಡರು 3 ಬಾರಿ ಇದೇ ಸಂಗತಿ ಹೇಳಿದಾಗ ಬಿಜೆಪಿ ಸದಸ್ಯರ ತಾಳ್ಮೆ ಕೆಟ್ಟಿತು. ಶಾಸಕ ಮಾಧುಸ್ವಾಮಿ ಮತ್ತು ಬಸವರಾಜ ಬೊಮ್ಮಾಯಿ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಕಾರ್ಯಾಂಗದ ಮುಖ್ಯಸ್ಥರಾಗಿರುವ ರಾಜ್ಯಪಾಲರಿಗೆ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಲ್ಪಮತಕ್ಕೆ ಕುಸಿದಿದೆ ಎಂದೆನಿಸಿದಾಗ ಹೀಗೆ ಸೂಚನೆ ನೀಡಲು ಅವಕಾಶವಿದೆ ಎಂದರು.




ಸಚಿವರು ಉಲ್ಲೇಖಿಸಿದಂತೆ ಅರುಣಾಚಲ ಪ್ರದೇಶ ಸರ್ಕಾರ ಅಂದು ಬಹುಮತ ಹೊಂದಿತ್ತು. ಆಗ ಸಾಂವಿಧಾನಿಕ ಪೀಠ ರಾಜ್ಯಪಾಲರ ಮಧ್ಯಪ್ರವೇಶದ ಬಗ್ಗೆ ಆದೇಶಿಸಿದೆ. ಆದರೆ, ರಾಜ್ಯದಲ್ಲಿ ಈ ಸರ್ಕಾರ ಅಲ್ಪಮತಕ್ಕೆ ಕುಸಿದಿದೆ ಎಂಬ ಬಗ್ಗೆ ರಾಜ್ಯಪಾಲರಿಗೆ ಶಂಕೆ ಮೂಡಿದೆ. ಹೀಗಾಗಿ ರಾಜ್ಯಪಾಲರು ಈ ಆದೇಶ ನೀಡಿದ್ದಾರೆ ಎಂದರು.

ಈ ಹಿಂದೆ ರಾಜ್ಯದಲ್ಲೂ ಇಂಥ ಬೆಳವಣಿಗೆ ನಡೆದು ರಾಜ್ಯಪಾಲರ ಮಧ್ಯಪ್ರವೇಶವಾಗಿದೆ ಎಂದು ಉದಾಹರಣೆ ಸಹಿತ ಬಸವರಾಜ ಬೊಮ್ಮಾಯಿ ವಿವರಿಸಿದರು. ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ರಾಜ್ಯಪಾಲರ ವಿರುದ್ಧ ಮುಗಿಬಿದ್ದು ಗೋಬ್ಯಾಕ್ ಗವರ್ನರ್, ಬಿಜೆಪಿ ಏಜೆಂಟ್ ಗವರ್ನರ್ ಎಂದು ಘೋಷಣೆ ಕೂಗಿದರು.